



# ವಿಶಾಖಪಟ್ಟಣಂ ಆಶ್ರಮದಲ್ಲಿ ಪ್ರಬಂಧ ಸ್ಪರ್ಧೆ

ವಿಶಾಖಪಟ್ಟಣಂ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಜುಲೈ ೨೦೨೦ರಲ್ಲಿ ಪ್ರಬಂಧ ಸ್ಪರ್ಧೆಯೊಂದನ್ನು ನಡೆಸಲಾಗಿತ್ತು. ಕೋವಿಡ್-೧೯ ಹಿನ್ನೆಲೆಯಲ್ಲಿ ವಿಧಿಸಲಾಗಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ಈ ಸ್ಪರ್ಧೆಯನ್ನು ನಡೆಸಿದ್ದರಿಂದ, ಆಗಿನ ನಿಬಂಧನೆಗಳಿಗೆ ಅನುಗುಣವಾಗಿಯೇ ಈ ಸ್ಪರ್ಧೆಯನ್ನು ನಡೆಸಲಾಯಿತು. ಇಂಗ್ಲಿಷ್ ಮತ್ತು ತೆಲುಗು ಭಾಷೆಗಳಲ್ಲಿ ಈ ಸ್ಪರ್ಧೆಯನ್ನು ನಡೆಸಲಾಗಿತ್ತು. ಒಟ್ಟು ೨೩೦ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಸೂಕ್ತ ಮೌಲ್ಯಮಾಪನದ ನಂತರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಹಾಗೂ ಪುಸ್ತಕಗಳ ರೂಪದಲ್ಲಿ ಬಹುಮಾನ ವಿತರಣೆ ಮಾಡಲಾಯಿತು. ೧೨ ಮಂದಿ ವಿಜೇತರು ಈ ಪ್ರಶಸ್ತಿಗಳನ್ನು ಸ್ವೀಕರಿಸಿದರು. ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ಹಾಗೂ ಸ್ವಾಮಿ ವಿವೇಕಾನಂದರ ಪುಸ್ತಕವನ್ನು ನೀಡಲಾಯಿತು. ೨೦೨೦ರ ಅಕ್ಟೋಬರ್ ೨೫ರಂದು ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು.






# ದಾವಣಗೆರೆ ಆಶ್ರಮದಲ್ಲಿ 'ರಾಷ್ಟ್ರೀಯ ಪೋಷಣ ಮಾಸ'

**'ರಾಷ್ಟ್ರೀಯ ಪೋಷಣ ಮಾಸ'**ವನ್ನು ದಾವಣಗೆರೆ ರಾಮಕೃಷ್ಣ ಮಿಷನ್ನಿನಲ್ಲಿ ಸೆಪ್ಟಂಬರ್ ತಿಂಗಳ ಕೊನೆಯ ವಾರ ಹಾಗೂ ಅಕ್ಟೋಬರ್ ಮೊದಲ ವಾರದಲ್ಲಿ ಆಚರಿಸಲಾಯಿತು. ದಾವಣಗೆರೆ ಸಮೀಪದ ದೊಡ್ಡ ಬಾತಿ ಪ್ರದೇಶದ ಅಂಗನವಾಡಿಗಳಲ್ಲಿ ವಿವಿಧ ವಸ್ತುಗಳ ವಿತರಣೆಯೊಂದಿಗೆ ಈ ಆಚರಣೆ ನಡೆಯಿತು. ಪೌಷ್ಟಿಕ ಆಹಾರ ಸಾಮಗ್ರಿಗಳು, ಸಿರಪ್, ಸಾಬೂನು ಹಾಗೂ ಇನ್ನಿತರ ಪುಷ್ಟಿ-ಆರೋಗ್ಯವರ್ಧಕ ವಸ್ತುಗಳನ್ನೊಳಗೊಂಡ ಕಿಟ್‌ಗಳನ್ನು ಆಶ್ರಮದಲ್ಲಿ ತಯಾರಿಸಿ ವಿತರಿಸಲಾಯಿತು. ಅಂಗನವಾಡಿಗಳಲ್ಲಿ ನಡೆದ ವಿತರಣೆಯ ಕಾರ್ಯಕ್ರಮಗಳಲ್ಲಿ ೩ ರಿಂದ ೬ ವರ್ಷದ ವರೆಗಿನ ೪೧೦ ಮಕ್ಕಳಿಗೆ ಹಾಗೂ ೧೫ ಮಂದಿ ಗರ್ಭಿಣಿಯರಿಗೆ, ಒಟ್ಟು ೪೨೫ ಕಿಟ್‌ಗಳನ್ನು ಹಂಚಲಾಯಿತು.

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020